ಓ.ಎಸ್. 198/2020
ಡಿ.ಡಬ್ಲ್ಯೂಃ-1

ದಿನಾಂಕಃ **21.08.2025**

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ ಹೆಚ್.ವಿ.ಎಂ. ವಕೀಲರಿಂದಃ

ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ರಂಗಪ್ಪ , ಆಂಜಿನಪ್ಪ ಮತ್ತು ನಾಗೇಶಪ್ಪ ನನಗೆ ಅಣ್ಣಂದಿರು. ವೆಂಕಟರಮಣಯ್ಯನವರು ಸಹ ನನಗೆ ಅಣ್ಣನಾಗಬೇಕು. ರಂಗಪ್ಪ , ಆಂಜಿನಪ್ಪ ಮತ್ತು ವೆಂಕಟರಮಣಯ್ಯನವರು ತೀರಿಕೊಂಡಿರುತ್ತಾರೆ. ಅಳವಿನಾಗೇನಹಳ್ಳಿ ಗ್ರಾಮದ ಸರ್ವೆ ನಂ. 4 ರಲ್ಲಿ ನನಗೆ 1 ಎಕರೆ 32 ಗುಂಟೆ ಜಮೀನು ನನ್ನ ಪಾಲಿಗೆ ಬಂದಿರುತ್ತದೆ ಎಂದರೆ ಸರಿ. ಸರ್ವೆ ನಂ. 213 ರಲ್ಲಿನ ಒಟ್ಟು 3 ಎಕರೆ 25 ಗುಂಟೆ ಜಮೀನಿನಲ್ಲಿ ಉತ್ತರದ 25 ಗುಂಟೆ ಜಮೀನನ್ನು ಬಣವೆ ಜಾಗಕ್ಕಾಗಿ ಬಿಟ್ಟು ಉಳಿದ 3 ಎಕರೆ ಜಮೀನಿನಲ್ಲಿ ಉತ್ತರ-ದಕ್ಷಿಣವಾಗಿ ಭಾಗ ಮಾಡಿ ಪೂರ್ವದ ಕಡೆ 1 ಎಕರೆ 20 ಗುಂಟೆ ನನ್ನ ಭಾಗಕ್ಕೆ ಬಂದಿರುತ್ತದೆ ಎಂದರೆ ಸರಿ. ಸದರಿ ಜಮೀನಿನ ಪೂರ್ವಕ್ಕೆ ಪಾರ್ಥಸಾರಥಿರವ ಜಮೀನು ಇರುತ್ತದೆ ಎಂದರೆ ಸರಿ. ಪಶ್ಚಿಮಕ್ಕೆ ಸರ್ವೆ ನಂ. 211 ರಲ್ಲಿನ ರಂಗಪ್ಪ ಮತ್ತು ಆಂಜಿನಪ್ಪನವರ ಜಮೀನಿಗೆ ತಿರುಗಾಡಲು ದಾರಿ ಇರುತ್ತದೆ ಎಂದು ಸೂಚಿಸುವುದು ಸರಿಯಲ್ಲ.

**2.** ಬಣವೆ ಜಾಗಕ್ಕೆ ಬಿಟ್ಟಿದ್ದಂತಹ 25 ಗುಂಟೆಯನ್ನು ನನಗೆ,ನಾಗೇಶಪ್ಪ, ರಂಗಪ್ಪ, ಆಂಜಿನಪ್ಪ ಮತ್ತು ವೆಂಕಟರಮಣಯ್ಯನವರಿಗೆ ತಲಾ 5 ಗುಂಟೆ ಬಂದಿರುತ್ತದೆ. ಸಾಕ್ಷಿಯು ಮುಂದುವರೆದು ನಾಗೇಶಪ್ಪನವರಿಗೆ ಬಂದ 5 ಗುಂಟೆ ಜಮೀನಿಗೆ ಬದಲಾಗಿ ವೆಂಕಟರಮಣಯ್ಯನವರಿಗೆ ಬಂದಿದ್ದ 3 ಗುಂಟೆ ಜಮೀನನ್ನು ಬೇರೆ ಕಡೆ ಕೊಟ್ಟು ಸದರಿ 5 ಗುಂಟೆ ಜಮೀನನ್ನು ಅವರು ಪಡೆದುಕೊಂಡಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ಸದರಿ ಬಣವೆ ಜಾಗದಲ್ಲಿ ನನ್ನ ಪಾಲಿಗೆ ಬಂದಿರುವ 5 ಗುಂಟೆ ಮತ್ತು ವೆಂಕಟರಮಣಯ್ಯನವರ

ಪಾಲಿನ 10 ಗುಂಟೆ ಜಮೀನಿನ ಮಧ್ಯೆ ನನ್ನ ಸರ್ವೆ ನಂ. 212 ರಲ್ಲಿನ ಜಮೀನಿಗೆ ತಿರುಗಾಡಲು ಮತ್ತು ಸರ್ವೆ ನಂ. 211 ರಲ್ಲಿನ ವಾದಿಗಳ ಜಮೀನಿಗೆ ತಿರುಗಾಡಲು ಬಂಡಿ ದಾರಿ ಇರುತ್ತದೆ ಎಂದು ಸೂಚಿಸುವುದು ಸರಿಯಲ್ಲ. ಸರ್ವೆ ನಂ. 213 ರಲ್ಲಿ ನಾಗೇಶಪ್ಪನ ಪಾಲಿಗೆ ಬಂದಂತಹ ಜಮೀನಿನ ಚಕ್ಕುಬಂಧಿ ಹೇಳಲು ಆಗುವುದಿಲ್ಲ.

(ಈ ಹಂತದಲ್ಲಿ ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಸಹಿ/-

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ